ಸಂಯುಕ್ತ ಕರ್ನಾಟಕ

# ರಂಗಭೂಮಿ ಕಲಾವಿದರನ್ನು ಪ್ರೋತ್ಸಾಹಕ್ಕೆ ಅಭಿನಯ–2017

ಬೆಂಗಳೂರು: ವೈಭವೀಯುತ ಸಿನಿಮಾರಂಗಕ್ಕೆ ಮಾರಿಹೋಗಿ ರಂಗಭೂಮಿಯನ್ನು ಮರೆಯುತ್ತಿರುವ ಇಂದಿನ ದಿನಗಳಲ್ಲಿ, ಯುವಜನತೆಯಲ್ಲಿ ರಂಗಭೂಮಿಯ ಬಗ್ಗೆ ಆಸಕ್ತಿ ಮೂಡಿಸುವ ಜತೆಗೆ ರಂಗಭೂಮಿ ಕಲಾವಿದರನ್ನು ಪ್ರೋತ್ಸಾಹಿಸಲು ಜೈನ್ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಮ್ಯಾನೇಜ್ಮೆಂಟ್ ಸ್ಟಡೀಸ್ ಅಭಿನಯ 2017 ಕಾರ್ಯಕ್ರಮ ಹಮ್ಮಿಕೊಂಡಿತ್ತು.

ಈ ಬಾರಿಯ ಅಭಿನಯ ರಾಜ್ಯಮಟ್ಟದ ಕಿರುನಾಟಕೋತ್ಸವ, ರಂಗಭೂಮಿಯಲ್ಲಿನ ಉದಯೋನ್ಮುಖ ಹಕ್ಕಿಗಳ ಕಲರವಕ್ಕೆ ಉತ್ತಮ ವೇದಿಕೆಯನ್ನು ಕಲ್ಪಿಸಿದ್ದಲ್ಲದೆ, ಪ್ರತಿವರ್ಷದಂತೆ ಈ ವರ್ಷವೂ ಸಹ, ರಂಗಭೂಮಿಯಲ್ಲಿ ಶ್ರಮಿಸಿದ ರಂಗ ಕರ್ಮಿಗಳಿಗೆ 'ಅಭಿನಯ ರಂಗ ಪ್ರಶಸ್ತಿ' ನೀಡಿ ಗೌರವಿಸಿತು. ರಾಷ್ಟ್ರಮಟ್ಟದಲ್ಲಿ ಆಯೋಜಿಸಲಾಗಿದ್ದ ಕನ್ನಡ ಕಿರುನಾಟಕ ಹಬ್ಬಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು. ಸ್ಪರ್ಧೆಯ ಅಂತಿಮ ಸುತ್ತಿನಲ್ಲಿ ನಿಮಿತ್ತ, ಸುತ್ತಿಕೊಂಡರೆ ಸರ್ಪ, ಅಭಿಯಾನ ಎಂಬ 3 ಅತ್ಯುತ್ತಮ ನಾಟಕಗಳು ಪ್ರದರ್ಶನಗೊಂಡವು.